## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಅತಿ ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾವಂತ ನಿರುದ್ಯೋಗಿ ಯುವಕರ ಆರ್ಥಿಕ ಸಶಕ್ತೀಕರಣಕ್ಕಾಗಿ ಯುವಶಕ್ತಿ ಸ್ವಸಹಾಯ ಗುಂಪುಗಳಿಗೆ ಸೌಲಭ್ಯ ಒದಗಿಸುವ ಕುರಿತು.

ಓದಲಾಗಿದೆ:- ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಇವರ ಪತ್ರ ಸಂಖ್ಯೆ:ದೇಹಿನಿ/ಯುವ/ಸಿಆರ್-52ಸಿ/2016-17, ದಿನಾಂಕ:04.04.2016.

******

ಪ್ರಸ್ತಾವನೆ:-

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ 2016-17ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದ ಕಂಡಿಕೆ:201ರ ಉಪ ಕಂಡಿಕೆ-3ರಲ್ಲಿ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಯುವಜನರ ಆರ್ಥಿಕ ಸಶಕ್ತೀಕರಣಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ. ಘೋಷಣೆ ಅನುಷ್ಠಾನಕ್ಕೆ 2016-17ನೇ ಸಾಲಿನ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಪ್ರತಿ ತಾಲ್ಲೂಕಿನ ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುವ ಸದಸ್ಯರನ್ನೊಳಗೊಂಡ 4 ರಿಂದ 5 ಗುಂಪಿನಂತೆ ಹಾಗೂ ಅತಿ ಹಿಂದುಳಿದ 40 ತಾಲ್ಲೂಕುಗಳಲ್ಲಿ ಪ್ರತಿ ತಾಲ್ಲೂಕಿಗೆ 3 ಗುಂಪುಗಳಂತೆ ಒಟ್ಟು 286 ಗುಂಪುಗಳಿಗೆ, 10 ಸದಸ್ಯರನ್ನೊಳಗೊಂಡ ಯುವಶಕ್ತಿ ಗುಂಪುಗಳ ಪ್ರತಿ ಗುಂಪಿಗೆ ತಲಾ ರೂ.3.50 ಲಕ್ಷಗಳಂತೆ ಸೌಲಭ್ಯ ಒದಗಿಸಲು ರೂ.10.00 ಕೋಟಿಗಳ ಅನುದಾನ ಹಾಗೂ ಯೋಜನೆಯ ಅನುಷ್ಠಾನದ ಮಾರ್ಗಸೂಚಿಗಳಿಗೆ ಮಂಜೂರಾತಿ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

3/2/17

### ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯು 361 ಬಿಎಂಎಸ್ 2016, ಬೆಂಗಳೂರು
### ದಿನಾಂಕ: 01-02-2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2016-17ನೇ ಸಾಲಿನ ಆಯವ್ಯಯದಲ್ಲಿನ ಲೆಕ್ಕಶೀರ್ಷಿಕೆ:2225-03-190-04ರಲ್ಲಿ ಒದಗಿಸಿರುವ ಮೊತ್ತ ರೂ.150.00 ಕೋಟಿಗಳಲ್ಲಿ ಅತಿ ಹಿಂದುಳಿದ/ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಯುವಜನರ ಆರ್ಥಿಕ ಸಶಕ್ತೀಕರಣಕ್ಕಾಗಿ ರೂ.10.00 ಕೋಟಿಗಳಲ್ಲಿ ಈ ಕಾರ್ಯಕ್ರಮವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾರ್ಗಸೂಚಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಾದರಿಯಲ್ಲಿ ಫಲಾನುಭವಿಗಳ ಆಯ್ಕೆ ವಿಧಾನವನ್ನು ಅನುಸರಿಸಿ, ಸದರಿ ಇಲಾಖೆಗಳಿಂದ ಆಯ್ಕೆ ಮಾಡಿದ ಫಲಾನುಭವಿಗಳನ್ನು ಹೊರತುಪಡಿಸಿ ಯುವಶಕ್ತಿ ಗುಂಪುಗಳ ಮೂಲಕ ಯುವಜನರ ಆರ್ಥಿಕ ಸಶಕ್ತೀಕರಣಕ್ಕಾಗಿ ಪ್ರತಿ ಗುಂಪಿಗೆ ಗರಿಷ್ಠ ರೂ.3.50 ಲಕ್ಷಗಳಂತೆ ಸೌಲಭ್ಯ ಒದಗಿಸಲು ಯೋಜನೆಗೆ ನಿಯಮಾನುಸಾರ ಹಾಗೂ ಪಾರದರ್ಶಕತೆಯನ್ವಯ ಮಂಜೂರಾತಿ ನೀಡಿ ಹಾಗೂ ಯೋಜನೆ ಅನುಷ್ಠಾನಕ್ಕಾಗಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿನ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಿ ಆದೇಶಿಸಿದೆ.

...2

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 398 ವೆಚ್ಚ-3 2016, ದಿನಾಂಕ:06.06.2016ರ ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ 57 ಐಎಂಎಂ 2016, ದಿನಾಂಕ:12.01.2017ರ ಸಹಮತಿಯನ್ವಯ ಹೊರಡಿಸಲಾಗಿದೆ

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

(ಆರ್. ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, (ಎ ಮತ್ತು ಇ) (ಲೆಕ್ಕ ಪರಿಶೋಧನೆ-1) (ಲೆಕ್ಕಪರಿಶೋಧನೆ-2), ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ.
4. ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ.
5. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
6. ರಾಜ್ಯ ಹುಜೂರು ಖಜಾನೆ, ಬೆಂಗಳೂರು.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ.
3. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸ ಸೌಧ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

# ಅನುಬಂಧ

## ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 361 ಬಿಎಂಎಸ್ 2016, ದಿನಾಂಕ: 01.02.2017

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಹಿಂದುಳಿದ ವರ್ಗದ ವಿದ್ಯಾವಂತ ನಿರುದ್ಯೋಗಿ ಯುವಜನರ ಆರ್ಥಿಕ ಸಶಕ್ತೀಕರಣಕ್ಕಾಗಿ **"ಯುವಶಕ್ತಿ ಶಕ್ತಿ ಸ್ವಸಹಾಯ ಗುಂಪುಗಳನ್ನು"** ರಚಿಸಿ ಸ್ವಯಂ ಉದ್ಯೋಗಕ್ಕೆ ಸಾಲ ಸೌಲಭ್ಯ ಒದಗಿಸುವ ಕುರಿತು ರೂಪಿಸಲಾದ ಮಾರ್ಗ ಸೂಚಿ.

**ಯೋಜನೆಯ ಉದ್ದೇಶ:-**

1. ಡಿ.ದೇವರಾಜ ಅರಸುರವರ ಜನ್ಮ ಶತಮಾನೋತ್ಸವ ಹಾಗೂ ವರ್ಷಾಚರಣೆ ಅಂಗವಾಗಿ ಹೊಸ ಯೋಜನೆಯನ್ನು ಜಾರಿಗೆ ತರಲು ಯುವಶಕ್ತಿ ಗುಂಪುಗಳನ್ನು ರಚಿಸಿ ಗ್ರಾಮರಾಯಭಾರಿ ಮಾದರಿಯಲ್ಲಿ ಕಾರ್ಯ ನಿರ್ವಹಿಸಲು ಗುಂಪುಗಳ ಮೂಲಕ ಆರ್ಥಿಕ ನೆರವು ಒದಗಿಸುವುದು.
2. ಹಿಂದುಳಿದ ವರ್ಗಗಳಿಗೆ ಸೇರಿದ 18 ರಿಂದ 35 ವರ್ಷದೊಳಗಿನ ಯುವಕ/ಯುವತಿಯರು ಎಸ್.ಎಸ್.ಎಲ್.ಸಿ. ಇಂದ ಪದವಿವರೆಗೆ ವ್ಯಾಸಂಗ ಮಾಡಿ ಉದ್ಯೋಗ ದೊರೆಯದೆ ನಿರುದ್ಯೋಗಿಗಳಾಗಿರುತ್ತಾರೆ. ಗ್ರಾಮೀಣ ಪ್ರದೇಶದ ನಿರುದ್ಯೋಗಿ/ಅರೆ ಉದ್ಯೋಗಿ ಯುವಕ/ಯುವತಿಯರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಹಾಗೂ ಉದ್ಯೋಗಕ್ಕಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಪ್ಪಿಸಲು ಪ್ರತಿ ಹಳ್ಳಿಯಲ್ಲಿ ಅಥವಾ ಎರಡು-ಮೂರು ಹಳ್ಳಿಗಳು ಸೇರಿ ಗರಿಷ್ಟ 10 ನಿರುದ್ಯೋಗಿ ಯುವ ಸದಸ್ಯರನ್ನು ಸೇರಿಸಿ ಒಂದು ಸ್ವ-ಸಹಾಯ ಗುಂಪನ್ನು ರಚಿಸುವುದು.
3. ಈ ಸ್ವ-ಸಹಾಯ ಗುಂಪುಗಳ ಮೂಲಕ ಗ್ರಾಮ ಮಟ್ಟದಲ್ಲಿ ಜನರಿಗೆ ಅವಶ್ಯವಿರುವ ಸೇವೆಗಳನ್ನು/ಕಾಮಗಾರಿಗಳನ್ನು ಮಾಡಲು ಈ ಸ್ವ-ಸಹಾಯ ಗುಂಪುಗಳಿಗೆ ಆದ್ಯತೆಯ ಮೇಲೆ ಕಾರ್ಯನೀಡಬೇಕು. ಗ್ರಾಮ ಸ್ವಚತೆ, ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಸೇರಿಸುವುದು. ರೈತರ ಸಮಸ್ಯೆಗಳಿಗೆ ಪರಿಹಾರ ದೊರಕಿಸುವುದು ಇತ್ಯಾದಿ.
4. ಗ್ರಾಮೀಣ ಪ್ರದೇಶದ ಕುಟುಂಬಗಳ ಅರ್ಹ ಸದಸ್ಯರನ್ನು ಗುರುತಿಸಿ ಅವರನ್ನು ಸ್ವ ಸಹಾಯ ಗುಂಪುಗಳನ್ನಾಗಿ ಪರಿವರ್ತಿಸಲು ಆದ್ಯತೆ ನೀಡುವುದು.
5. ಗ್ರಾಮೀಣ ಯುವ ಜನತೆಗೆ ಸರ್ಕಾರಿ ಅಥವಾ ಖಾಸಗಿ ಉದ್ಯೋಗ ದೊರಕಿಸುವುದು ಅಸಾಧ್ಯವಾದ, ಅವರ ಸ್ವಂತ ಸ್ಥಳದಲ್ಲಿಯೇ ಸ್ಥಿರವಾಗಿ ನೆಲಸಲು ಸ್ವ ಉದ್ಯೋಗ ಸೃಷ್ಟಿಸಿಕೊಳ್ಳಲು ಅವಕಾಶ ಕಲ್ಪಿಸುವುದು.

**ಸೌಲಭ್ಯ:**

1. ಈ ಸ್ವ-ಸಹಾಯ ಗುಂಪುಗಳ ಮೂಲಕ ಸದಸ್ಯರು ಕೈಗೊಳ್ಳುವ ಆರ್ಥಿಕ ಚಟುವಟಿಕೆ ಅನುಸಾರ ಪ್ರತಿ ಸದಸ್ಯರಿಗೆ ಗರಿಷ್ಠ ರೂ.35000/-ಗಳವರೆಗೆ ಆರ್ಥಿಕ ನೆರವು, ಇದರಲ್ಲಿ ಶೇ.30ರಷ್ಟು ಗರಿಷ್ಠ ರೂ.10000/-ಗಳ ಸಹಾಯಧನ ಹಾಗೂ ಉಳಿಕೆ ಶೇ.70ರಷ್ಟು ಗರಿಷ್ಠ ರೂ.25000/-ಗಳು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಪ್ರತಿ ಗುಂಪಿಗೆ ತಲಾ ರೂ.3.50ಲಕ್ಷಗಳಂತೆ ಸಾಲ/ಸಹಾಯಧನದ ಸೌಲಭ್ಯ ಒದಗಿಸುವುದು.

**ಯೋಜನೆಯ ವ್ಯಾಪ್ತಿ:-**

ಡಾ.ನಂಜುಂಡಪ್ಪ ವರದಿಯಲ್ಲಿ ತಿಳಿಸಿರುವ ಅತ್ಯಂತ ಹಿಂದುಳಿದ 39 ಹಾಗೂ ಅತಿ ಹಿಂದುಳಿದ 40 ತಾಲ್ಲೂಕುಗಳು ಹೀಗೆ ಒಟ್ಟು 79 ತಾಲೂಕುಗಳಲ್ಲಿ ಯುವ ಶಕ್ತಿ ಗುಂಪುಗಳಿಗೆ ಪ್ರತಿ ಗುಂಪಿಗೆ ತಲಾ ರೂ.3.50ಲಕ್ಷ ಗಳಂತೆ ಸೌಲಭ್ಯ ಒದಗಿಸುವುದು.

**ಗುಂಪುಗಳ ಆಯ್ಕೆ**

ಸರ್ಕಾರದ ಆದೇಶ ಸಂಖ್ಯೆ: ಸಕಇ 162 ಎಸ್‌ಡಿಸಿ 2015, ದಿನಾಂಕ:09/09/2016ರ ಆದೇಶದಲ್ಲಿ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿ ಮೂಲಕ ಗುಂಪುಗಳನ್ನು ಆಯ್ಕೆ ಮಾಡುವುದು.



**ಯೋಜನೆಯ ರೂಪರೇಷಗಳು:-**

1. ಪ್ರತಿಯೊಂದು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗಿ ಯುವಕ ಯುವತಿಯರ ಸ್ವ-ಸಹಾಯ ಗುಂಪುಗಳನ್ನು ರಚಿಸುವುದು.
2. ಪ್ರತಿಯೊಂದು ಗುಂಪಿನಲ್ಲಿ 10 ಸದಸ್ಯರಿರುವಂತೆ ಪ್ರಾರಂಭಿಕವಾಗಿ ಅತ್ಯಂತ ಹಿಂದುಳಿದ/ಅತ್ಯಂತ ಹಿಂದುಳಿದ ಒಟ್ಟು 79 ತಾಲೂಕುಗಳಲ್ಲಿ ಆರ್ಥಿಕ ನೆರವು. ಪ್ರತಿ ಸದಸ್ಯರಿಗೆ ರೂ.35000/-ಗಳಂತೆ ಪ್ರತಿ ಗುಂಪುಗೆ ಗರಿಷ್ಠ ರೂ.3.50ಲಕ್ಷಗಳ ಆರ್ಥಿಕ ನೆರವು.
3. ಯುವ ಸಮುದಾಯವು ಕಿರಾಣಿ ಅಂಗಡಿ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ನೇಯ್ಗೆ, ಹೋಟೇಲ್, ಎರೆಹುಳು ಗೊಬ್ಬರ ತಯಾರಿಕೆ ಮುಂತಾದ ಉದ್ದೇಶಗಳಿಗೆ ಆರ್ಥಿಕ ನೆರವು.
4. ಈ ಸ್ವಸಹಾಯ ಗುಂಪುಗಳು ನಿಗಮದ ಯೋಜನೆಗಳ ಮತ್ತು ರಾಜ್ಯ ಸರ್ಕಾರದ ಇಲಾಖೆ/ ನಿಗಮಗಳ ವತಿಯಿಂದ ದೊರೆಯುವ ಸೌಲಭ್ಯಗಳನ್ನು ಗ್ರಾಮೀಣ ಜನರಿಗೆ ತಲುಪಿಸಲು ಸಂಪರ್ಕ ಸೇತುವೆಯಂತೆ ಕೆಲಸ ನಿರ್ವಹಿಸುವುದು.
5. ನಿಗಮದ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ವ್ಯವಸ್ಥಾಪಕರು ಸ್ವಸಹಾಯ ಗುಂಪುಗಳನ್ನು ಗುರುತಿಸಿ ಈ ಯೋಜನೆ ಬಗ್ಗೆ ಮಾಹಿತಿ ನೀಡುವುದು. ಸೌಲಭ್ಯ ಕೋರಿ ಅರ್ಜಿ ಸಲ್ಲಿಸುವ ಗುಂಪುಗಳ ಪಟ್ಟಿ ಮಾಡಿ ಗುಂಪಿನ ಸದಸ್ಯರ ಅರ್ಹತೆಯನ್ನು ನಿಯಮಾನುಸಾರ ಪರಿಶೀಲಿಸಿ ವಿಧಾನಸಭಾ ಕ್ಷೇತ್ರದ ಆಯ್ಕೆ ಸಮಿತಿ ಮುಂದೆ ಮಂಡಿಸಿ ಅನುಮೋದನೆ ಪಡೆದು, ಹಣ ಬಿಡುಗಡೆಗೆ ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವುದು.
6. ಜಿಲ್ಲಾ ವ್ಯವಸ್ಥಾಪಕರು, ಸ್ವಸಹಾಯ ಗುಂಪುಗಳಿಂದ ಸಾಲ ವಿತರಣಾ ಪೂರ್ವ ದಾಖಲಾತಿಗಳನ್ನು ಪಡೆದುಕೊಂಡು ಸ್ವಸಹಾಯ ಗುಂಪಿನ ಸದಸ್ಯರಿಗೆ ಸಾಲದ ಸದುಪಯೋಗ ಹಾಗೂ ಘಟಕ ಸ್ಥಾಪನೆ ಬಗ್ಗೆ ಅಗತ್ಯ ತಿಳುವಳಿಕೆ ನೀಡುವುದು.
7. ಜಿಲ್ಲಾ ವ್ಯವಸ್ಥಾಪಕರು, ಆದೇಶ ಪ್ರತಿಗಳನ್ನು ಸ್ವಸಹಾಯ ಗುಂಪುಗಳು ಕಾರ್ಯ ನಿರ್ವಹಿಸುತ್ತಿರುವ ಗ್ರಾಮ ಪಂಚಾಯತಿ ಪಿ.ಡಿ.ಒ.ಗಳಿಗೆ ಕಳುಹಿಸಿಕೊಡುವುದು. ಹಾಗೂ ..ಗ್ರಾಮ ಮಟ್ಟದಲ್ಲಿ ಅನುಷ್ಠಾನಗೊಳಿಸುತ್ತಿರುವ ಸರ್ಕಾರದ ಇನ್ನಿತರೆ ಯೋಜನೆಗಳ ಕುರಿತು ಗುಂಪಿನ ಸದಸ್ಯರಿಗೆ ಮಾಹಿತಿ ನೀಡುವಂತೆ ತಿಳಿಸುವುದು.
8. ಸರ್ಕಾರದ ಇತರೆ ಯೋಜನೆಗಳ ಬಗ್ಗೆ ಮಾಹಿತಿ ಪಡೆದುಕೊಂಡ ಯುವಶಕ್ತಿ ಗುಂಪಿನ ಸದಸ್ಯರು ಗ್ರಾಮ ಮಟ್ಟದಲ್ಲಿ ಅರ್ಹರಿರುವವರಿಗೆ ಮಾಹಿತಿ ತಲುಪಿಸುವುದು. ಮಾಹಿತಿ ಪಡೆದ ಸಾರ್ವಜನಿಕರು ಇತರೆ ಯೋಜನೆ/ಕಾರ್ಯಕ್ರಮಗಳ ಪ್ರಯೋಜನ ಪಡೆಯಲು ಬಯಸಿದಲ್ಲಿ ಅವರಿಗೆ ಅಗತ್ಯ ಸಹಕಾರ/ಸಲಹೆ ನೀಡುವುದು.

**ಯೋಜನೆ ಅನುಷ್ಠಾನದ ಕಾರ್ಯತಂತ್ರ:**

1. ಸಮಾನ ಆಸಕ್ತಿಯುಳ್ಳ ಯುವ ಸಮುದಾಯದವರು ಸ್ವಸಹಾಯ ಗುಂಪುಗಳನ್ನು ರಚಿಸಿರುವುದರಿಂದ ಆ ಗುಂಪುಗಳು ಪ್ರಬಲ ಗುಂಪುಗಳಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.
2. ಗುಂಪುಗಳ ರಚನೆ ಕಾರ್ಯ ಈ ಕೆಳಕಂಡ ಸೂಚಿತ ಅಂಶಗಳನ್ನು ಗಮನದಲ್ಲಿಡುವುದು.
   A. ಹಿಂದುಳಿದ ವರ್ಗಗಳ ಪ್ರವರ್ಗ 1 ಮತ್ತು 2ಎಗೆ ಸೇರಿದ ಹಾಗೂ ಪ್ರವರ್ಗ-3ಎ ಮತ್ತು 3ಬಿಗೆ ಸೇರಿರಬೇಕು. (ಮತಿಯ ಅಲ್ಪಸಂಖ್ಯಾತರು ಹಾಗೂ ವಿಶ್ವಕರ್ಮ ಸಮುದಾಯಗಳನ್ನು ಹೊರತು ಪಡಿಸಿ)
   B. ಗುಂಪು/ಫಲಾನುಭವಿಗಳ ಆಯ್ಕೆಯಲ್ಲಿ ಕಡ್ಡಾಯವಾಗಿ ಪ್ರವರ್ಗ-1 ಮತ್ತು 2ಎ ಗೆ ಶೇ.70 ಹಾಗೂ ಪ್ರವರ್ಗ-3ಎ ಮತ್ತು 3ಬಿಗೆ ಶೇ.30ರಷ್ಟು ಮೀಸಲಾತಿ ಅನುಪಾತದನ್ವಯ ಆಯ್ಕೆ ಮಾಡಬೇಕು.
   C. ವಾರ್ಷಿಕ ಆದಾಯ ಮಿತಿ ರೂ.40000/-ಗಳೊಳಗಿರುವ ಗ್ರಾಮೀಣ ಯುವ ಸಮುದಾಯ.
   D. ಗುಂಪಿನ ಸದಸ್ಯರು ಕನಿಷ್ಠ ಎಸ್ಎಸ್ಎಲ್‌ಸಿ ಉತ್ತೀರ್ಣರಾಗಿರಬೇಕು.
   E. ಗುಂಪಿನ ಸದಸ್ಯರು ಮದ್ಯವ್ಯಸನಿ/ಮಾದಕ ದ್ರವ್ಯ ವ್ಯಸನಿಗಳಾಗಿರಬಾರದು ಹಾಗೂ ಅಪರಾಧ ಹಿನ್ನಲೆ ಇರಬಾರದು.

ತರಬೇತಿ:

ಈ ಯೋಜನೆಯಡಿ ತರಬೇತಿಗಳನ್ನು ಹಮ್ಮಿಕೊಳ್ಳುವುದು.

ಗುಂಪಿನ ಸದಸ್ಯರು ಕೈಗೊಳ್ಳುವ ವೃತ್ತಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಹಾಗೂ ಗುಂಪಿನ ಸಮರ್ಥ ನಿರ್ವಹಣೆ ಬಗ್ಗೆ 3 ದಿನಗಳ ಇ.ಡಿ.ಪಿ. ತರಬೇತಿಯನ್ನು ಕೌಶಲ್ಯಾಭಿವೃದ್ಧಿ ನಿಗಮ ಅಥವಾ ನೊಂದಾಯಿತ ತರಬೇತಿ ಸಂಸ್ಥೆಗಳ ಮೂಲಕ ತರಬೇತಿ ನೀಡುವುದು.

**4. ಗುಂಪುಗಳ ಬಲವರ್ಧನೆ :**

ಸ್ವ ಸಹಾಯ ಗುಂಪುಗಳು ಕಡ್ಡಾಯವಾಗಿ ಉಳಿತಾಯ ಖಾತೆಯನ್ನು ಹೊಂದಿರಬೇಕು. ಸಣ್ಣ ಪ್ರಮಾಣದಲ್ಲಿ ಆಂತರಿಕ ಸಾಲ ಚಟುವಟಿಕೆಗಳನ್ನು ಕೈಗೊಳ್ಳಬೇಕು. ನಿಗಮದಿಂದ ಪಡೆದ ಆರ್ಥಿಕ ನೆರವನ್ನು ಗುಂಪಿನ ಪ್ರತಿನಿಧಿಗಳು ಎಲ್ಲಾ ಸದಸ್ಯರಿಗೆ ಸಾಲ ಮಂಜೂರಾತಿ ಆದೇಶ ಪತ್ರದಲ್ಲಿ ತಿಳಿಸಿರುವಂತೆ ಹಂಚಿಕೆ ಮಾಡುವುದು.

**5. ಸಾಲದ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:**

1. ದ್ವಿಪ್ರತಿಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು.
2. ಜಾತಿ ಮತ್ತು ಆದಾಯ ಪ್ರಮಾಣ ಪತ್ರ
3. ವಾಸದ ಪುರಾವೆಗಾಗಿ ಪಡಿತರ ಚೀಟಿ/ಚುನಾವಣೆ ಗುರುತಿನ ಚೀಟಿ/ ಆಧಾರ ಕಾರ್ಡ್
4. ಅರ್ಜಿದಾರರ ಪಾಸ್‌ಪೋರ್ಟ್ ಅಳತೆಯ 3 ಭಾವ ಚಿತ್ರಗಳು
5. ಉಳಿತಾಯ ಖಾತೆ ಹೊಂದಿರುವ ಬಗ್ಗೆ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ
6. ನಿಗಮದಿಂದ ಸೌಲಭ್ಯ ಪಡೆಯುವ ಬಗ್ಗೆ ಗುಂಪಿನ ಸದಸ್ಯರು ತೀರ್ಮಾನಿಸಿದ ಬಗ್ಗೆ ಠರಾವಿನ ಪ್ರತಿ.

**6. ಸಾಲ ವಿತರಣೆ ಸಂದರ್ಭದಲ್ಲಿ ಪಡೆಯಬೇಕಾದ ದಸ್ತಾವೇಜುಗಳು:**

ದಿನಾಂಕ:07-03-2003ರ ನಿಗಮದ ಸುತ್ತೋಲೆ ಸಂಖ್ಯೆ :ಕಹಿನಿ/ವ್ಯ/ಸಿಆರ್-100/2002-03 ಅನ್ವಯ ದಸ್ತಾವೇಜುಗಳನ್ನು ಪಡೆಯುವುದು.

| | | |
|---|---|---|
| 1. ಪ್ರಾಮೀಸರಿ ನೋಟು | | ಫಲಾನುಭವಿಗಳಿಂದ |
| 2. ಮರುಸಂದಾಯ ಪತ್ರ | | |
| 3. ಡಿಮ್ಯಾಂಡ್ ಪ್ರಾಮೀಸರಿ ನೋಟು - ಬಟವಾಡೆ ಪತ್ರ | | |
| 4. ಆಧಾರ ಪತ್ರ (ಸಾಲದಿಂದ ಉತ್ಪನ್ನವಾದ ಆಸ್ತಿಯ ಆಧಾರ) | | |
| 5. ಖಾತರಿ ಪತ್ರ | --- | ಜಾಮೀನುದಾರರಿಂದ |
| 6. ಒಪ್ಪಂದದ ವಿವರಣ ಪತ್ರ | --- | ಸ್ವ-ಸಹಾಯ ಗುಂಪುಗಳ ಪ್ರತಿನಿಧಿಗಳಿಂದ |

**7. <u>ಸಾಲ/ಸಹಾಯಧನ ಖಾತಾ ಪುಸ್ತಕ ನಿರ್ವಹಣೆ:-</u>**

ಆಯ್ಕೆಯಾದ ಫಲಾನುಭವಿಗಳಿಗೆ ಬಿಡುಗಡೆಯಾದ ಸಹಾಯಧನ ಮತ್ತು ಸಾಲದ ವಿವರಗಳನ್ನು ಫಲಾನುಭವಿಗಳ ಹಾಗೂ ಜಾಮೀನುದಾರರ ಪೂರ್ಣ ವಿವರಗಳನ್ನು ಮಂಜೂರಾತಿ ಆದೇಶ ಪತ್ರದಲ್ಲಿ ತಿಳಿಸಿರುವಂತೆ ನಿರ್ವಹಿಸುವುದು.

**8. ವಿಮೆ:-**

ಈ ಯೋಜನೆಯಡಿ ಪಡೆಯುವ ಸಾಲದಿಂದ ಉತ್ಪನ್ನವಾದ ಆಸ್ತಿಗೆ ಬೆಂಕಿ, ನೀರು, ಭೂಕಂಪ, ಕಳ್ಳತನ ಇತ್ಯಾದಿ ಪ್ರಕೋಪಗಳಿಂದ ಆಗುವ ನಷ್ಟವನ್ನು ತಪ್ಪಿಸಲು ಕಡ್ಡಾಯವಾಗಿ ವಿಮೆ ಮಾಡಿಸಬೇಕು. ವಿಮಾ ಪ್ರೀಮಿಯಮ್ ಮೊತ್ತವನ್ನು ಫಲಾನುಭವಿಗಳು ಭರಿಸಬೇಕು ಈ ಬಗ್ಗೆ ಸದಸ್ಯ ಕಾರ್ಯದರ್ಶಿಗಳು ಸೂಕ್ತ ಕ್ರಮ ವಹಿಸುವುದು.

**9. ಮರುಪಾವತಿ ಅವಧಿ:-**

ಈ ಯೋಜನೆಯಲ್ಲಿ ಪಡೆದ ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿ ದರದಲ್ಲಿ 34 ಕಂತುಗಳಲ್ಲಿ ಮರುಪಾವತಿಸಬೇಕು.

(ಆರ್.ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ